ಈ) ಈ ಮೊದಲಿನ ಜಿಲ್ಲಾ ಮುಖ್ಯ ರಸ್ತೆಯಾದ ಧಾರವಾಡ ಬೈಲಹೊಂಗಲ ವಯಾ ಬುಡರಕಟ್ಟಿ ರಸ್ತೆಯನ್ನು ಪರಿವರ್ತಿಸಲು ನೂತನ ರಾಜ್ಯ ಹೆದ್ದಾರಿಯನ್ನಾಗಿ ಮುಂಗಸೋಳೆ (ರಾಜ್ಯ ಗಡಿಯಿಂದ) ಮಮಿಗಟ್ಟಿ (ಧಾರವಾಡ) ಪ್ರಸ್ತಾವನೆಯಲ್ಲಿ ಸೇರಿಸಿಕೊಳ್ಳಲಾಗಿದೆ. ಸದ್ಯಕ್ಕೆ ಎರಡು ರಸ್ತೆಗಳ

ಉ) ಹೌದು ನೂತನ ರಾಜ್ಯ ಹೆದ್ದಾರಿಯನ್ನಾಗಿ " ಕಲಘಟಗಿ ಗೋಕಾಕ್ ಎಸ್‌ಹೆಚ್ " ನ್ನು ಪ್ರಸ್ತಾಪಿಸಲಾಗಿದ್ದು ಈ ರಸ್ತೆಯಲ್ಲಿ ಧಾರವಾಡ ಬೈಲಹೊಂಗಲ ವಯಾ ದೊಡವಾಡ ರಸ್ತೆಯನ್ನು ಸೇರಿರುತ್ತದೆ.

ಊ) ಜಿಲ್ಲಾ ಮುಖ್ಯ ರಸ್ತೆಯಾದ ಬೈಲಹೊಂಗಲ ಗೋಕಾಕ ವಯಾ ಮುರಗೋಡ ರಸ್ತೆಯು ರಾಜ್ಯ ಹೆದ್ದಾರಿಯನ್ನಾಗಿ ಪರಿಶೀಲಿಸಲು ಇರುವ ಪ್ರಸ್ತಾವನೆಯಲ್ಲಿ ಕಲಘಟಗಿ ಗೋಕಾಕ ರಾಜ್ಯ ಹೆದ್ದಾರಿ ರಸ್ತೆಯಲ್ಲಿ ಸೇರ್ಪಡೆಗೊಂಡಿರುತ್ತದೆ.

ಬೆಳಗಾವಿ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿ ಯೋಜನೆಯಡಿಯಲ್ಲಿ ಅಭಿವೃದ್ಧಿ

2462 (3149) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಈ ವರ್ಷ ಬರಗಾಲ ಕಾಮಗಾರಿ ಕೆಲಸಗಳಿಗೆ ಹಾಗೂ ಕುಡಿಯುವ ನೀರಿಗಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿತ್ತು;

ಆ) ಎಷ್ಟು ಕೆಲಸಗಳು ಪೂರ್ಣಗೊಂಡಿರುತ್ತವೆ ಹಾಗೂ ಅರ್ಧಕ್ಕೆ ನಿಂತ ಕೆಲಸಗಳನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಹಣ ಬೇಕಾಗುವುದು;

ಇ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಗೋಶಾಲೆಗಳನ್ನು ತೆರೆಯಲಾಗಿದೆ;

ಈ) ಗೋಶಾಲೆಗಳನ್ನು ತೆರೆಯದೇ ಇರುವುದರಿಂದ ರೈತರು ತಮ್ಮ ದನಗಳನ್ನು ಕಸಾಯಿಖಾನೆಗೆ ಕಳುಹಿಸಲು ಕಟುಕರಿಗೆ ಮಾರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ) ಹಾಗಿದಲ್ಲಿ, ರೈತರು ದನಗಳನ್ನು ಕಟುಕರಿಗೆ ಮಾರುವುದನ್ನು ತಡೆಗಟ್ಟಲು ಬೆಳಗಾವಿ ಜಿಲ್ಲೆಯಲ್ಲಿ ಗೋಶಾಲೆಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದೆ;

ಊ) ಬೈಲಹೊಂಗಲ ಮತಕ್ಷೇತ್ರದಲ್ಲಿ ಅರ್ಧಕ್ಕೆ ನಿಂತ ಬರಗಾಲ ಕಾಮಗಾರಿ ಕೆಲಸಗಳನ್ನು ಪೂರ್ಣಗೊಳಿಸಲು ಸರ್ಕಾರ ಯಾವ ವಿಶೇಷವಾದ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಬೆಳಗಾವಿ ಜಿಲ್ಲೆಯಲ್ಲಿ 2003–04 ರಲ್ಲಿ ಉದ್ಯೋಗ ಸೃಜನೆಯ ಕಾಮಗಾರಿಗಳಿಗಾಗಿ ರೂ.356.25 ಲಕ್ಷ ಹಾಗೂ ಕುಡಿಯುವ ನೀರಿಗಾಗಿ ರೂ.463.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ಆ) ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 2559 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. 1443 ಕಾಮಗಾರಿಗಳ ಪ್ರಗತಿಯಲ್ಲಿರುತ್ತವೆ. (ಒಟ್ಟು 4402) ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯ ಅನುದಾನ ನೀಡಲಾಗಿದೆ.

ಇ) ಗೋಶಾಲೆಗಳನ್ನು ಇದುವರೆಗೆ ತೆರೆದಿರುವುದಿಲ್ಲ.

ಈ) ಬೆಳಗಾವಿ ಜಿಲ್ಲೆಯಲ್ಲಿ ಇಂತಹ ಪ್ರಸಂಗ ವರದಿಯಾಗಿರುವುದಿಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಕೆಲಸಗಳನ್ನು ಪೂರ್ತಿಗೊಳಿಸಲು ಸಾಕಷ್ಟು ಹಣ ಬಿಡುಗಡೆ ಮಾಡಲಾಗಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನ

2465 (3104) : ಶ್ರೀ ಕೃಷ್ಣಪ್ಪ .ವಿ (ದೊಡ್ಡಬಳ್ಳಾಪುರ) ಮಾನ್ಯ ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳಾವುದು: ಈ ಯೋಜನೆಗಳಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಪಾಲು ಎಷ್ಟು?

ಆ) ಕಳೆದ 3 ವರ್ಷಗಳಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಎಷ್ಟು ಅನುದಾನ ಒದಗಿಸಲಾಗಿದೆ (ವರ್ಷಾವಾರು ಮಾಹಿತಿ ನೀಡುವುದು)

ಇ) ಯಾವ ಯಾವ ಯೋಜನೆಗಳಿಗೆ ಈ ಅನುದಾನವನ್ನು ಒದಗಿಸಲಾಗಿದೆ:

ಈ) ದೊಡ್ಡಬಳ್ಳಾಪುರ ತಾಲ್ಲೂಕಿಗೆ ಯಾವ ಯಾವ ಯೋಜನೆಗಳಿಗೆ ಎಷ್ಟು ಹಣ ಒದಗಿಸಲಾಗಿದೆ:

ಉ) ಇದರಲ್ಲಿ ಖರ್ಚಾಗಿರುವ ಹಾಗೂ ಖರ್ಚಾಗದೇ ಉಳಿದಿರುವ ಹಣವೆಷ್ಟು:

ಶ್ರೀ ಆರ್.ಬಿ. ತಿಮ್ಮಾಪುರ್ (ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು):

ಅ) ರಾಜ್ಯ ಆಯವ್ಯಯದಲ್ಲಿ ಸೇರ್ಪಡೆಯಾಗಿರುವ (i) ನೂರಕ್ಕೆ ನೂರು ಕೇಂದ್ರದ ಅನುದಾನ ಹೊಂದಿರುವ ಕೇಂದ್ರ ವಲಯ ಯೋಜನೆಗಳು ಮತ್ತು ಕೇಂದ್ರದ ಅನುದಾನ ಹೊಂದಿರುವ ಕೇಂದ್ರ ಪುರಸ್ಕೃತ ಯೋಜನೆಗಳು (ii) ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆ (iii) ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ ಹಾಗೂ (iv) IIನೇ ಆರ್ಥಿಕ ಆಯೋಗದ ಅನುದಾನ ಇವು ಕೇಂದ್ರದ ಯೋಜನೆಗಳಾಗಿವೆ. ಈ ಯೋಜನೆಗಳ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲಿನ ವಿವರಗಳನ್ನು ಅನುಬಂಧ–I ರಲ್ಲಿ ನೀಡಿದೆ.

ಆ) ಕಳೆದ 3 ವರ್ಷಗಳಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಆಯವ್ಯಯದಲ್ಲಿ ಒದಗಿಸಲಾದ ಹಣದ ವಿವರಗಳನ್ನು ಅನುಬಂಧ–Iರಲ್ಲಿ ನೀಡಲಾಗಿದೆ.

ಇ) ವಿವರಗಳನ್ನು ಅನುಬಂಧ–IIರಲ್ಲಿ ನೀಡಲಾಗಿದೆ.

ಈ) ವಿವರಗಳನ್ನು ಅನುಬಂಧ–IIIರಲ್ಲಿ ನೀಡಲಾಗಿದೆ.

ಉ) ವಿವರಗಳನ್ನು ಅನುಬಂಧ–IIIರಲ್ಲಿ ನೀಡಲಾಗಿದೆ.

ಅನುಬಂಧ–I

2000-01, 2001-02 ಹಾಗೂ 2002-03ರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಆಯವ್ಯಯದಲ್ಲಿ ಒದಗಿಸಿರುವ ಹಣದ ವಿವರಗಳು

(ಕೋಟಿ ರೂ.ಗಳಲ್ಲಿ)

ಕ್ರ.ಸಂ	ಕೇಂದ್ರ ಯೋಜನೆಗಳ ಹೆಸರು	2000–2001		2001–2002		2002–2003	
		ಕೇಂದ್ರದ ಪಾಲು	ರಾಜ್ಯದ ಪಾಲು	ಕೇಂದ್ರದ ಪಾಲು	ರಾಜ್ಯದ ಪಾಲು	ಕೇಂದ್ರ ಪಾಲು	ರಾಜ್ಯದ ಪಾಲು
1	ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಕಾರ್ಯಕ್ರಮಗಳು	1246.68	221.16	1271.43	213.95	1179.84	229.24